೧		೨	೩	೪
೨೩	,,	ನರೋನಾ	ಪಟ್ಟಣ, ಕಡಗಂಜಿ	೧
೨೪	,,	ಕಾಳಗಾ	ಪಟ್ಟಣ, ಡಂಗಾಪುರ	೧
೨೫	,,	ಆಳಂದ್	ಪಟ್ಟಣ, ಸುಂತನೂರು, ಕಡಗಂಜಿ	೧
೨೬	,,	ತುಳಜಾಪುರ	ಆಳಂದ್, ಖಿಜೂರಿ	೧
೨೭	,,	ಆಳಂದ್	ಮಹಗಾಂವ್, ಸಾಲ್ಗೀಂಗಾ	೧
೨೮	,,	ರಾಚಣ್ಣ ದೇವಸ್ಥಾನ	ನರೋನಾ, ಕಮಲಾನಗರ	೧
೨೯	,,	ಗಡಲಗಾವ್	ಕಡಗಂಜಿ, ಬೋಧನ್	೧
೩೦	,,	ಡಂಗಾಪುರ	ಪಟ್ಟಣ, ನಿಂಬರ್ಗಾ	೧
೩೧	,,	ಗೋಲಾ	ಪಟ್ಟಣ, ಕಡಗಂಜಿ, ಸಂತನೂರ್	೧
೩೨	,,	ವಾಗ್ದರಿ	ಚಿಂಚನಸೂರ್, ಸಂಗೊಳಗಿ	೧
೩೩	,,	ನಾಂಡೇಡ್	ಪಟ್ಟಣ, ಆಳಂದ್	೧
೩೪	,,	ಕಲ್ಯಾಣ	ಬಬಲಾದ್, ಅಂಬಲ್ಲಾ	೧

ರಾಜ್ಯ ಸರ್ಕಾರದ ಹಡಗುಗಳ ಬಗ್ಗೆ

೫೬೬. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಧಣಿ).— ಮಾನ್ಯ ಬೃಹತ್ ಮಂತ್ರು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರ ಹಡಗುಗಳನ್ನು ಹೊಂದಿದೆಯೇ ಹಾಗಿದ್ದಲ್ಲಿ ವಿವರಗಳೇನು, ಹಾಗೂ ಅವುಗಳನ್ನು ಯಾವ ರಾಜ್ಯಕ್ಕೆ ಉಪಯೋಗಿಸಲಾಗುತ್ತಿದೆ?

ಆ) ಹಡಗುಗಳ ಬಗ್ಗೆ ಕರ್ನಾಟಕ ಹಡಗು ನಿಗಮವೊಂದು ಅಸ್ತಿತ್ವದಲ್ಲಿದೆಯೇ ?

ಇ) ಹಾಗಿದ್ದಲ್ಲಿ ಕಳೆದ ೩ ವರ್ಷಗಳಿಂದ ಅದರ ಪದಾಧಿಕಾರಿಗಳಾರು ಹಾಗೂ ಆ ನಿಗಮದ ಆದಾಯ ಎಷ್ಟೆಷ್ಟೆಂದು ಈ ಸಂಸ್ಥೆ ಯಾವ ಕಾರ್ಯಕ್ರಮಗಳನ್ನು ನೆರವೇರಿಸಿದೆ.

ಶ್ರೀ ಜೆ. ಹೆಚ್. ಪಟೇಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು).—

ಅ) ರಾಜ್ಯ ಸರ್ಕಾರ ಹಡಗುಗಳನ್ನು ಹೊಂದಿಲ್ಲ.

ಆ) ಇಲ್ಲ.

ಇ) (ಅ) ಮತ್ತು (ಆ) ಪ್ರಶ್ನೆಗಳ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಯುನೈಟೆಡ್ ಬ್ರಿವರೀಸ್ ಮುಚ್ಚಿರುವುದು.

೫೬೭. ಶ್ರೀ ಸಿ. ಕಣ್ಣನ್ (ಶಾಂತಿನಗರ).— ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಯುನೈಟೆಡ್ ಬ್ರಿವೇರಿಸ್ ಮುಚ್ಚಿರುವುದಕ್ಕೆ ಕಾರಣಗಳು ಮತ್ತು ಅದು ಯಾವಾಗಿನಿಂದ ಮುಚ್ಚಿದೆ ?

ಆ) ಇದು ಮುಚ್ಚಿರುವುದರಿಂದ ಎಷ್ಟು ಜನ ಕೆಲಸಗಾರರು ನಿರುದ್ಯೋಗಿಗಳಾಗಿದ್ದಾರೆ ?

ಇ) ಈ ಕಾರ್ಖಾನೆಯನ್ನು ಪುನಃ ಪ್ರಾರಂಭಿಸಲು ಮತ್ತು ಕೆಲಸಗಾರರಿಗೆ ಪುನರ್ ವಸತಿ ಒದಗಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?